194 (123) ಶ್ರೀ ಬಸವರಾಜು ಎ ಎಸ್ (ಅರಸೀಕೆರೆ)

ಶ್ರೀ ಶರಣ ಬಸಪ್ಪ ದರ್ಶನಾಪುರ (ಕೃಷಿಮಾರುಕಟ್ಟೆ ಸಚಿವರು)

ಅ ರಾಜ್ಯದಲ್ಲಿ ಕೃಷಿ ಮಾರಾಟ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಯಾವಾಗ ಅಳವಡಿಸಿಕೊಳ್ಳಲಾಗಿದೆ?

ಆ ದ್ವಿತೀಯ ಸಹಾಯಕರ ತಾತ್ಕಾಲಿಕ ಸೇನಾ ಜೇಷ್ಠತಾ ಪಟ್ಟಿಗೆ ಬಂದಿರುವ ಆಕ್ಷೇಪಣೆಗಳನ್ನು (ವಿವರ ನೀಡುವುದು)?

ಇ ಈ ಆಕ್ಷೇಪಣೆಗಳ ಬಗ್ಗೆ ಕೈಗೊಂಡಿರುವ ಕ್ರಮವೇನು ಅವುಗಳನ್ನು ಈವರೆಗೂ ಇತ್ಯರ್ಥಗೊಳಿಸದಿರುವ ಕಾರಣಗಳೇನು?

ಈ ದ್ವಿತೀಯ ದರ್ಜೆ ಸಹಾಯಕರ ಅಂತಿಮ ಸೇವಾಜೇಷ್ಟತಾ ಪಟ್ಟಿಯನ್ನು ಯಾವಾಗ ಪ್ರಕಟಿಸಲಾಗುವುದು?

ಉ ಈ ಇಲಾಖೆಯಲ್ಲಿ ಯಾವ ಯಾವ ದರ್ಜೆಯ ಎಷ್ಟು ಹುದ್ದೆಗಳು ಖಾಲಿ ಇವೆ, ಇವುಗಳಲ್ಲಿ ಎಷ್ಟು ಹುದ್ದೆಗಳನ್ನು ಮೇಲಿನ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು ಈ ನಿಟ್ಟಿನಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪೂರ

ಅ ಕೃಷಿ ಮಾರಾಟ ಇಲಾಖೆಯಲ್ಲಿ ಪರಿಷ್ಕೃತ ಕರಡು ವೃಂದ ಮತ್ತು ನೇಮಕಾತಿಗಳನ್ನು ದಿನಾಂಕ 06/02/2007ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ನಿಯಮಗಳನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು

ಆ 6 ವಿವರಗಳನ್ನು ಅನುಬಂಧ–1 ನಲ್ಲಿ ನೀಡಿದೆ

ಇ ಆಕ್ಷೇಪಣೆಗಳನ್ನು ಪರಿಶೀಲಿಸಿದ್ದು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದೆ

ಉ ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ–2 ನಲ್ಲಿ ನೀಡಿದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮುಂಬಡ್ತಿಗೆ ಲಭ್ಯವಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು

ಅನುಬಂಧ–1

ದಿನಾಂಕ 01/01/2003 ರಲ್ಲಿದ್ದಂತೆ ದ್ವಿತೀಯ ದರ್ಜೆ ಸಹಾಯಕರ ಪದವೃಂದದ ತಾತ್ಕಾಲಿಕ ಸೇವಾ ಜೇಷ್ಠತಾ ಪಟ್ಟಿಗೆ ಸ್ವೀಕರಿಸಲಾದ ಆಕ್ಷೇಪಣೆಗಳ ವಿವರ

ಕ್ರ.ಸಂ ಆಕ್ಷೇಪಣೆಸಲ್ಲಿಸಿರುವ ನೌಕರರ ಹೆಸರು ಹಾಗೂ ಹುದ್ದೆ

1 ಎನ್ ಎಸ್ ಕೋಟೂರ, ವರ್ಗೀಕರಣಕಾರರು, ಕೃತಮಾಸ, ರಾಣೆಬೆನ್ನೂರು

2 ವಿ ನಾಗರಾಜಯ್ಯ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ನರ್ದೇಶಕರ ಕಛೇರಿ, ಕೋಲಾರ

3 ಎಸ್ ಪಿ ಹಿರೆಮಠ್, ಮಾರಾಟ ಸಹಾಯಕರು, ಕೃಉಮಾಸ, ಬಳ್ಳಾರಿ

4 ಎ ಎಸ್ ಸ್ವರ್ಣಲತ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ನಿರ್ದೇಶಕರ ಕಛೇರಿ, ಹಾಸನ

5 ಎಮ್ ದೇವೇಂದ್ರಪ್ಪ, ಲೆಕ್ಕಿಗ ದರ್ಜೆ–3, ಕೃಉಮಾಸ, ಚಿತ್ತಾಪುರ

6 ಸಿ ಕೆ ಜೋರಾಪೂರ ದ್ವಿತೀಯ ದರ್ಜೆ ಸಹಾಯಕರು, ಕೃಉಮಾಸ, ಬೆಳಗಾಂ

ಆಕ್ಷೇಪಣೆ ವಿವರ

1 ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರು ಎಸ್ ಕೊಟ್ಟೂರ ಎಂದು ನಮೂದಿಸಿರುವುದನ್ನು ಎನ್ ಎಸ್ ಕೋಟ್ಟೂರ ಎಂದ ನಮೂದಿಸಿರುವುದನ್ನು ಎನ್ ಎಸ್ ಕೋಟ್ಟೂರ ಎಂದು ನಮೂದಿಸಲು ಕೋರಿರುತ್ತಾರೆ

2 ಈ ಹಿಂದೆ ಪ್ರತ್ಯೇಕ ಸೇವಾ ಜೇಷ್ಠತಾ ಪಟ್ಟಿಯಲ್ಲಿ ಅವರ ಜೇಷ್ಠತೆ ಕ್ರಮ ಸಂಖ್ಯೆ 180 ರಲ್ಲಿದ್ದು, 1996ರಲ್ಲಿ ಎರಡೂ ಸೇವೆಗಳು ವಿಲೀನಗೊಂಡು ನಂತರ ಅವರ ಜೇಷ್ಠತೆಯು

ಕ್ರಮ ಸಂಖ್ಯೆ 482ರಲ್ಲಿ ಆಗಿರುವುದು ತೃಪ್ತಿಕರವಾಗಿಲ್ಲವೆಂದು ಆಕ್ಷೇಪಿಸಿರುತ್ತಾರೆ

3 ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜೇಷ್ಠತಾ ಪಟ್ಟಿಯ್ಲಿ ಸದರಿಯವರ ಹೆಸರು ಎನ್ ಪಿ ಹಿರೇಮಠ ಎಂದು ನಮೂದಿಸಿರುವುದನ್ನು ಎಸ್ ಪಿ ಹಿರೇಮಠ ಎಂದು ನಮೂದಿಸಲು ಕೋರಿರುತ್ತಾರೆ

4 ದಿನಾಂಕ 31/12/1996ಕ್ಕೆ ಪ್ರಕಟಿಸಿದ್ದ ದ್ವಿತೀಯ ದರ್ಜೆ ಸಹಾಯಕರ ಪದವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಜೇಷ್ಠತೆ ಸಂಖ್ಯೆ 566ರಲ್ಲಿ ಇದ್ದು, ದಿನಾಂಕ 01/01/03 ದ್ದಂತೆ ಪ್ರಕಟಿಸಿರುವೆ ದ್ವಿತೀಯ ದರ್ಜೆ ಸಹಾಯಕರ ಜೇಷ್ಠತಾ ಪಟ್ಟಿಯುಲ್ಲಿ ಅವರ ಹೆಸರು ಕ್ರಮ ಸಂಖ್ಯೆ 570ರಲ್ಲಿ ಪ್ರಕಟಗೊಂಡಿರುವುದಕ್ಕೆ ಆಕ್ಷೇಪಿಸಿ ಕಾರಣಗಳನ್ನು ತಿಳಿಸುವಂತೆ ಕೋರಿರುತ್ತಾರೆ

5 ಜನ್ಮ ದಿನಾಂಕ 28/07/1975 ಎಂಬು ದರ ಬದಲಾಗಿ 28/07/1978 ಎಂದು ಹಾಗೂ ಸೇವೆಗೆ ಸೇರಿದ ದಿನಾಂಕ 10/03/1997ರ ಬದಲಾಗಿ 17/03/1997ಎಂದು ಪ್ರಕಟಿಸಲು ಕೋರಿರುತ್ತಾರೆ

ಸದರಿಯವರು ದಿನಾಂಕ 05/07/1983 ಕ್ಕಿಂತ ಮೊದಲು ಸ್ಥಳೀಯ ಅಭ್ಯರ್ಥಿಯಾಗಿ ಇಲಾಖೆಯಲ್ಲಿ ದ್ವಿತೀಯ 02/07/1986 ರಂದು ಹೊರಡಿಸಲಾದ ಅಧಿಸೂದನೆಯ ಪ್ರಕಾರ ದಿನಾಂಕ 02/07/1986 ರಂದು ಹೊರಡಿಸಲಾದ ಅಧಿಸೂಚನೆಯ ಪ್ರಕಾರ ದಿನಾಂಕ 04/07/1986 ರಿಂದ ದ್ವಿತೀಯ ದರ್ಜೆ ಸಹಾಯಕರಾಗಿ ಮುಂದುವರೆಸಿರುವುದರಿಂದ ದಿನಾಂಕ 04/07/1986ರ ಪ್ರಕಾರ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸುವಂತೆ ಕೋರಿರುತ್ತಾರೆ

ಅನುಬಂಧ–2

ಕ್ರ.ಸಂ	ಪದನಾಮ	ಮಂಜೂರಾಗಿರುವ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	ನಿರ್ದೇಶಕರು	01	01	——
2	ಹೆಚ್ಚುವರಿ ನಿರ್ದೇಶಕರು	03	03	——
3	ಜಂಟಿ ನಿರ್ದೇಶಕರ ಪದವ್ಯಂದದ ಹುದ್ದೆಗಳು	19	18	01
4	ಉಪ ನಿರ್ದೇಶಕರ ಪದವ್ಯಂದದ ಹುದ್ದಗಳು	22	12	10
5	ಸಹಾಯಕ ನಿರ್ದೇಶಕರ ಪದವ್ಯಂದದ ಹುದ್ದೆಗಳು	47	32	15
6	ಸಹಾಯಕ ನಿರ್ದೇಶಕರು (ಸಾಂಖ್ಯಿಕ)	1	1	–
7	ಜಿಲ್ಲಾ ಲೆಕ್ಕಪರಿಶೋಧಕರ ಪದವ್ಯಂದದ ಹುದ್ದೆಗಳು	138	106	32
8	ಅಧೀಕ್ಷಕ ಅಭಿಯಂತರರು	01	01	–
9	ಕಾರ್ಯನಿವಾಹಕ ಅಭಿಯಂತರರು	04	03	01
10	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು /ತಾಂತ್ರಿಕ ಸಹಾಯಕರು	21	20	01

11	ಸಹಾಯಕ ಅಭಿಯಂತರರು	80	60	20
12	ಕಿರಿಯ ಅಭಿಯಂತರರು ಆಕೃತಿ ರಚನಾಕಾರರು ಆರ್ಕಿಟೆಕ್ಟ್ ಡ್ರಾಫ್ಟ್ ಮನ್ ಹೆಡ್ ಡ್ರಾಫ್ಟ್ಸ್ ಮನ್	27	22	05
13	ಅಧೀಕ್ಷರು	148	102	16
14	ಸಹಾಯಕ ಸಂಖ್ಯಾಧಿಕಾರಿ	01	–	01
15	ರಸಾಯನ ತಜ್ಞರು	12	01	01
16	ಹಿರಿಯ ಮಾರುಕಟ್ಟೆ ಮೇಲ್ವಿಚಾರಕರು	147	95	52
17	ಶೀಘ್ರಲಿಪಿಗಾರರು	19	06	10
18	ಪ್ರಥಮ ದರ್ಜೆ ಸಹಾಯಕರು	350	110	24
19	ಮಾರುಕಟ್ಟೆ ಮೇಲ್ವಿಚಾರಕರು	290	155	00
20	ದಾಟಾ ಫೀಡರ್	06	06	00
21	ಮಾರಾಟ ಸಹಾಯಕರ ಪದವ್ಯಂದದ ಹುದ್ದೆಗಳು	656	517	00
22	ದ್ವಿತೀಯ ದರ್ಜೆ ಸಹಾಯಕರು	253	176	00
23	ಬೆರಳಚ್ಚುಗಾರರು	202	117	83
24	ವಾಹನ ಚಾಲಕರು	154	70	84
25	ಮಾರುಕಟ್ಟೆ ಮೇಲ್ವಿಚಾರಕ ದರ್ಜೆ–4	142	37	105
26	ಅಟೆಂಡರ್	41	10	31
27	ಸಿಪಾಯಿ	596	341	255
28	ಎಲೆಕ್ಟ್ರಿಷಿಯನ್ ಗ್ರೇಡ್–1	02	02	–
29	ಟೆಕ್ನಿಷಿಯನ್ ಗ್ರೇಡ್–1	01	01	–
30	ಟೆಕ್ನಿಷಿಯನ್ ಗ್ರೇಡ್–2	02	02	–